# ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪರೀಕ್ಷೆ

# PDO - 2009

**ಸಮಯ: 90 ನಿಮಿಷಗಳು** **ಅಂಕಗಳು :150**

## ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್

1. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆಯ ಕಾಯಿದೆ ಮತ್ತು ಯೋಜನೆಗೆ ನಿಧಿಯನ್ನು ನೀಡುವವರು:
   ಎ) ವಿಶ್ವಬ್ಯಾಂಕ್
   ಬಿ) ರಾಜ್ಯ ಸರ್ಕಾರ
   ಸಿ) ಕೇಂದ್ರ ಸರ್ಕಾರ
   ಡಿ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ

2. ರಮೇಶನು REGS ಯೋಜನೆಯಲ್ಲಿ ಹುದ್ದೆಗಾಗಿ ಅರ್ಜಿ ಹಾಕಿದ ಮತ್ತು ಸ್ಥಳೀಯ ಕಾಲುವೆ ಕೆಲಸ ಅವನಿಗೆ ಸಿಕ್ಕಿತು. ಆದರೂ ಸಹ ಆ ಕಾರ್ಯಕ್ಕೆ ನಿಯೋಜಿತ ಸಂಸ್ಥೆಯು 20 ದಿನವಾದರೂ ಕೆಲಸವನ್ನು ಆರಂಭಿಸಲಿಲ್ಲ. ಇಂತಹ ಸಮಯದಲ್ಲಿ ರಮೇಶನು ಮೊದಲು ಕಾಣಬೇಕಾದವರು.
   ಎ) ಪ್ರೋಗ್ರಾಂ ಅಧಿಕಾರಿ
   ಬಿ) ಜಿಲ್ಲಾ ಪ್ರೋಗ್ರಾಂ ಕೋ ಆರ್ಡಿನೇಟರ್
   ಸಿ) ತಾಲ್ಲೂಕು ಪಂಚಾಯತ್ ಅಧ್ಯಕ್ಷ
   ಡಿ) ಇವರಾರೂ ಅಲ್ಲ

3. ವೆಂಕಟೇಶನ ಕುಟುಂಬದಲ್ಲಿ ಅವನು, ಅವನ ಪತ್ನಿ, ಮತ್ತು ಮೂರು ಗಂಡು ಮಕ್ಕಳು ಕ್ರಮವಾಗಿ 24,19, ಮತ್ತು 16 ವರ್ಷದವರು ಹಾಗೂ 45 ವಯಸ್ಸಿನ ಅವಿವಾಹಿತ ಸೋದರಿ ಇದ್ದಾರೆ. ಅವನ ಮೊದಲ ಮಗನು ಮದುವೆಯಾಗಿ ಅವನ ಪತ್ನಿ ಮತ್ತು ಮಗಳೊಡನೆ ಹತ್ತಿರದ ಗ್ರಾಮದಲ್ಲಿ ಅದೇ ಪಂಚಾಯತ್‌ನಲ್ಲಿದ್ದಾರೆ. ಈಗ ಯಾರ್ಯಾರು ವೆಂಕಟೇಶನ ಕುಟುಂಬದವರು REGS ಯೋಜನೆಯಡಿ ಕುಟುಂಬದವರೆಂದು ನೋಂದಾಯಿಸಿಕೊಳ್ಳಬಹುದು?
   ಎ) ವೆಂಕಟೇಶ, ಅವನ ಪತ್ನಿ ಮತ್ತು ಅವಿವಾಹಿತ ಗಂಡು ಮಕ್ಕಳು
   ಬಿ) ವೆಂಕಟೇಶ, ಅವನ ಪತ್ನಿ ಮತ್ತು ತಂಗಿ ಹಾಗು ಎರಡನೆ ಮಗ
   ಸಿ) ವೆಂಕಟೇಶ, ಅವನ ಪತ್ನಿ, ತಂಗಿ ಮತ್ತು ಹಿರಿಯ ಇಬ್ಬರು ಗಂಡು ಮಕ್ಕಳು
   ಡಿ) ಕುಟುಂಬದ ಎಲ್ಲರೂ

4. ರಘು ಮತ್ತು ಅವನ ಕುಟುಂಬವು ಜನವರಿಯಲ್ಲಿ ಮತ್ತೊಂದು ಜಿಲ್ಲೆಗೆ ಹೋಗಿ ಸೆಪ್ಟೆಂಬರ್‌ನಲ್ಲಿ ಹಿಂತಿರುಗಿದರು. ಅವನು REGS ನಲ್ಲಿ ನೋಂದಾಯಿಸಲು ಗ್ರಾಮ ಪಂಚಾಯತ್ ಅವರನ್ನು ಸಂಪರ್ಕಿಸಿದಾಗ ಅವರು ಅವನಿಗೆ ಹೀಗೆ ಹೇಳಿದರು.
   ಎ) ಅವನ ಕುಟುಂಬವು REGS ಅಡಿಯಲ್ಲಿ ಅನ್ವಯಿಸುವುದಿಲ್ಲ
   ಬಿ) ಅವನ ಕುಟುಂಬವು REGS ಗೆ ಅನ್ವಯಿಸುತ್ತದೆ
   ಸಿ) 50 ದಿನಗಳ ಕಾಲ ಮಾತ್ರ ಅನ್ವಯಿಸುತ್ತದೆ. ಏಕೆಂದರೆ ಅವನು ಆರು ತಿಂಗಳ ಕಾಲ ಆ ಪ್ರದೇಶದಲ್ಲಿರಲಿಲ್ಲ
   ಡಿ) ಕುಟುಂಬದ ಒಬ್ಬ ಸದಸ್ಯರು ಮಾತ್ರ ಅರ್ಜಿ ಸಲ್ಲಿಸಬಹುದು.

5. ರಾಮುವಿಗೆ ಮಾರ್ಚ್ 2008ರಲ್ಲಿ ಜಾಬ್ ಕಾರ್ಡ್ ನೀಡಲಾಗಿದ್ದು ಅವನ ಮಗನಿಗೆ ಮೇ 2008ರಲ್ಲಿ 18 ವರ್ಷಗಳಾಯಿತು. ಅವನ ಮಗನು ಉದ್ಯೋಗಕ್ಕೆ ಅರ್ಹನಾಗಲು ರಾಮು ಇದನ್ನು ಮಾಡಬೇಕು?
   ಎ) ಗ್ರಾಮ ಪಂಚಾಯತ್‌ಗೆ ಕೂಡಲೇ ತಿಳಿಸಬೇಕು
   ಬಿ) ಗ್ರಾಮ ಪಂಚಾಯತ್ ಅವರು ವಾರ್ಷಿಕ ಅಪ್‌ಡೇಶನ್ ಮಾಡುವವರೆಗೆ ಕಾಯಬೇಕು
   ಸಿ) ಯೋಜನಾಧಿಕಾರಿ ಅವರನ್ನು ಸಂಪರ್ಕಿಸಬೇಕು
   ಡಿ) ಅವನು ಯಾವುದನ್ನು ಮಾಡಬೇಕಾಗಿಲ್ಲ. ಏಕೆಂದರೆ ಅವನ ಮಗನಿಗೆ 18 ವರ್ಷವಾದೊಡನೆ ತಾನಾಗಿಯೇ ಸೇರಿಸಲ್ಪಡುತ್ತಾನೆ

6. NREGA ಯ ಯೋಜನೆ ಅಡಿಯಲ್ಲಿಪಂಚಾಯತಿ ಕ್ಷೇತ್ರದ ಪೂರ್ಣ ಅನುಮತಿಸಲ್ಪಟ್ಟ ಕೆಲಸದಲ್ಲಿ
   ಎ) ಕಡೆಯ ಪಕ್ಷ ಶೇ. 20 ರಷ್ಟು ಖರ್ಚನ್ನು ಗ್ರಾಮ ಪಂಚಾಯಿತಿ ಅವರು ವಿನಿಯೋಗಿಸುತ್ತಾರೆ
   ಬಿ) ಕಡೆಯ ಪಕ್ಷ ಶೇ. 50 ರಷ್ಟು ಖರ್ಚನ್ನು ಗ್ರಾಮ ಪಂಚಾಯಿತಿ ಅವರು ವಿನಿಯೋಗಿಸುತ್ತಾರೆ

ಸಿ) ಸಂಪೂರ್ಣವಾಗಿ ಹೊರಗಿನ ಏಜೆನ್ಸಿಗಳು ನೋಡಿಕೊಳ್ಳುತ್ತಾರೆ

ಡಿ) ಆ ಕ್ಷೇತ್ರದ NGOಗಳು ಕಡೆಯ ಪಕ್ಷ ಶೇ. 20ರಷ್ಟನ್ನು ವಿನಿಯೋಗಿಸುತ್ತಾರೆ

7. ಸಾಮೂಹಿಕ ಶೌಚಾಲಯ ಸಂಕೀರ್ಣಗಳನ್ನು ನಿರ್ಮಿಸುವುದು ಮತ್ತು ಸುಸ್ಥಿತಿಯಲ್ಲಿಡುವುದು ಇವರ ಜವಾಬ್ದಾರಿಯಾಗಿದೆ.

ಎ) ಗ್ರಾಮ ಪಂಚಾಯತ್

ಬಿ) ರಾಜ್ಯ ಸರ್ಕಾರ

ಸಿ) ಕೇಂದ್ರ ಸರ್ಕಾರ

ಡಿ) ಮೇಲಿನ ಎಲ್ಲವೂ

8. ಈ ಕೆಳಗಿನವುಗಳಲ್ಲಿ ಯಾವುದು ಸತ್ಯವಲ್ಲ.

ಎ) ಪ್ರತಿ ಶಾಲೆಯು ಗಂಡು ಮತ್ತು ಹೆಣ್ಣು ಮಕ್ಕಳಿಗೆ ಬೇರೆ ಬೇರೆ ಶೌಚಾಲಯ ಹೊಂದಿರಬೇಕು

ಬಿ) ಪ್ರತಿ ಅಂಗನವಾಡಿಯು ಗಂಡು ಮತ್ತು ಹೆಣ್ಣು ಮಕ್ಕಳಿಗೆ ಬೇರೆ ಬೇರೆ ಶೌಚಾಲಯ ಹೊಂದಿರಬೇಕು

ಸಿ) ಪ್ರತಿ ಶಾಲೆಯು ಆರೋಗ್ಯ ನೈರ್ಮಲ್ಯದಲ್ಲಿ ತರಬೇತಿ ಹೊಂದಿದ ಒಬ್ಬ ಉಪಾಧ್ಯಾಯರನ್ನು ಹೊಂದಿರಬೇಕು

ಡಿ) ಶಾಲೆಯ ಶೌಚಾಲಯ ನಿರ್ಮಾಣಕ್ಕೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಪೋಷಕರು ಉಪಾಧ್ಯಾಯರು ಹಣ ಒದಗಿಸಬೇಕು

9. ಲಕ್ಷ್ಮೀ ಎಂಬುವರಿಗೆ ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ ಗೃಹವನ್ನು ವಿತರಿಸಲಾಗಿತ್ತು. ಅವರು ನಿರ್ಮಾಣ ಕಾರ್ಯದಲ್ಲಿ ನುರಿತ ವ್ಯಕ್ತಿ ಅಲ್ಲದ ಕಾರಣ ಅವರು

ಎ) ರಾಜ್ಯ ಸರ್ಕಾರದಿಂದ ನೇಮಿಸಲ್ಪಟ್ಟ ಗುತ್ತಿಗೆದಾರರನ್ನು ಕಾಣಬೇಕು

ಬಿ) ನಿರ್ಮಾಣ ಸಂಬಂಧವಾಗಿರುವ ಸರ್ಕಾರದ ಇಲಾಖೆಗಳ ಸಹಾಯ ಪಡೆಯಬೇಕು

ಸಿ) ಅವರೇ ಸ್ವತಃ ಸ್ಥಳೀಯ ಕೆಲಸದವರನ್ನು ಮತ್ತು ಕಟ್ಟಡದ ಮೂಲ ವಸ್ತುಗಳನ್ನು ಸಿದ್ಧಪಡಿಸಿಕೊಳ್ಳಬೇಕು

ಡಿ) ಮೇಲಿನ ಯಾವುವೂ ಅಲ್ಲ

10. ಕೇಂದ್ರ ಸರ್ಕಾರವು ಇಂದಿರಾ ಆವಾಸ್ ಯೋಜನೆಗೆ ಸಹಕಾರ, ಸಹಾಯ ನೀಡಲು ಈ ವಿಷಯಗಳನ್ನು ಆಧಾರವಾಗಿಟ್ಟುಕೊಳ್ಳುತ್ತದೆ.

ಎ) ರಾಜ್ಯದ ಗ್ರಾಮೀಣ ಬಡತನ ಮತ್ತು ದೇಶದ ಗ್ರಾಮೀಣ ಬಡತನ ಇವುಗಳ ಸರಾಸರಿ ಅನುಪಾತದ ಮೇರೆಗೆ

ಬಿ) ರಾಜ್ಯದ ಗ್ರಾಮೀಣ ಪ್ರದೇಶ ಮತ್ತು ದೇಶದ ಗ್ರಾಮೀಣ ಪ್ರದೇಶದ ಸರಾಸರಿ ಅನುಪಾತದ ಮೇರೆಗೆ

ಸಿ) ರಾಜ್ಯದ ಪುರುಷ ಮತ್ತು ಸ್ತ್ರೀಯರ ಸರಾಸರಿಯ ಅನುಪಾತದ ಮೇರೆಗೆ

ಡಿ) ಮೇಲಿನ ಎಲ್ಲವೂ ಹೌದು

11. ರಾಜೀವ್ ಗಾಂಧಿ ಗ್ರಾಮೀಣ ಗೃಹ ನಿರ್ಮಾಣ ಸಂಸ್ಥೆ, ನಿಯಮಿತ ಸರ್ಕಾರಿ ಸಂಸ್ಥೆಯನ್ನು ಸ್ಥಾಪಿಸಿದವರು.

ಎ) ಕೇಂದ್ರ ಸರ್ಕಾರ

ಬಿ) ಕರ್ನಾಟಕ ಸರ್ಕಾರ

ಸಿ) ಕೇಂದ್ರ ಮತ್ತು ಇತರ ಎಲ್ಲ ರಾಜ್ಯ ಸರ್ಕಾರದ ಸಹಯೋಗದಿಂದ

ಡಿ) ಮೇಲಿನ ಯಾವುವೂ ಅಲ್ಲ

12. ನಗರ ಪ್ರದೇಶ ಆಶ್ರಯ ಗೃಹ ನಿರ್ಮಾಣ ಯೋಜನೆಗೆ ಪ್ರಯೋಜನ ಪಡೆಯುವವನು ನೀಡಬೇಕಾದ ಕನಿಷ್ಟ ಹಣ.

ಎ) ರೂ.5000 ಬಿ) ರೂ.10000

ಸಿ) ನಿರ್ಮಾಣದ ಶೇ.10 ಡಿ) ನಿರ್ದಿಷ್ಟಪಡಿಸಿಲ್ಲ

13. ಅಂಬೇಡ್ಕರ್ ಗೃಹ ನಿರ್ಮಾಣ ಯೋಜನೆಯಡಿಯಲ್ಲಿ ಲಾಭ ಪಡೆಯುವವರು.

ಎ) ಸಾಲದ ಮೇಲೆ ಶೇ.11ರ ಬಡ್ಡಿ ಕಟ್ಟಬೇಕು

ಬಿ) ಸಾಲದ ಮೇಲೆ ಶೇ.10 ರ ಬಡ್ಡಿ ಕಟ್ಟಬೇಕು

ಸಿ) ಸಾಲದ ವೆಚ್ಚವನ್ನು 180 ತಿಂಗಳ ಕಂತಿನಲ್ಲಿ ಕಟ್ಟಬೇಕು

ಡಿ) ಸಾಲ ಪಾವತಿ ಮಾಡಬೇಕಾಗಿಲ್ಲ. ಏಕೆಂದರೆ ಪೂರ್ಣಹಣ ಸಬ್ಸಿಡಿ ಆಗಿ ಬಂದಿರುತ್ತದೆ

14. ನಿಯಮ 73ರಲ್ಲಿ ಸಂವಿಧಾನದ ತಿದ್ದುಪಡಿ ಮಾಡಿರುವುದು ಈ ಕುರಿತಾಗಿದೆ.

ಎ) ಪಂಚಾಯತಿರಾಜ್ ನಲ್ಲಿ 2-ಟಯರ್ [System] ವಿಧಾನವನ್ನು ಸ್ಥಾಪಿಸುವ ಕುರಿತದ್ದು

ಬಿ) ಪಂಚಾಯತಿರಾಜ್ ನಲ್ಲಿ 3-ಟಯರ್ [System]ವಿಧಾನವನ್ನು ಸ್ಥಾಪಿಸುವ ಕುರಿತದ್ದು

ಸಿ) ಜಿಲ್ಲಾ ಯೋಜನಾಸಮಿತಿಯ ಸ್ಥಾಪನೆ ಕುರಿತದ್ದು

ಡಿ) ಮೇಲಿನ ಎಲ್ಲವೂ ಹೌದು

15. ಕರ್ನಾಟಕ ಪಂಚಾಯತಿರಾಜ್ ಶಾಸನ 1993ರಲ್ಲಿನ ನಿಬಂಧನೆಗಳು ಜಾರಿಗೆ ಬಂದದ್ದು.

ಎ) 1ನವೆಂಬರ್ 1993 ಬಿ) 1 ಮೇ 1993

ಸಿ) 10ಮೇ 1993 ಡಿ) 1 ಮೇ 1994

16. ಮುನಿಸಿಪಾಲಿಟಿಯ ಮತ್ತು ಪಂಚಾಯತ್‌ಗಳ ಯೋಜನೆಯನ್ನು ಸಂಯೋಜಿಸುವವರು.

ಎ) ರಾಜ್ಯ ಸರ್ಕಾರ

ಬಿ) ಜಿಲ್ಲಾ ಯೋಜನಾ ಸಮಿತಿ

ಸಿ) ಆರೋಗ್ಯ ಮಂತ್ರಾಲಯ

ಡಿ) ಮೇಲಿನ ಯಾವುದು ಅಲ್ಲ

17. ಗ್ರಾಮ ಸಭೆಯು ಕನಿಷ್ಟ ಪಕ್ಷ ಎಷ್ಟು ಬಾರಿ ಸಂಧಿಸಬೇಕು.

ಎ) ಆರು ತಿಂಗಳು ಬಿ) ಮೂರು ತಿಂಗಳು

ಸಿ) ಎರಡು ವಾರ ಡಿ) ನಿರ್ದಿಷ್ಟ ಪಡಿಸಿಲ್ಲ

18. ಗ್ರಾಮ ಪಂಚಾಯತಿ ಇವುಗಳಿಗೆ ಜವಾಬ್ದಾರಿಯಾಗಿದೆ.

ಎ) ಪ್ರತಿ ವರ್ಷ ಶೇ. 10ರಷ್ಟು ಕುಟುಂಬಗಳಿಗೆ ಶೌಚಾಲಯ ಒದಗಿಸುವುದು ಮತ್ತು ಶೀಘ್ರವಾಗಿ ಸಂಪೂರ್ಣವಾಗಿ ಎಲ್ಲರಿಗೂ ನೀಡುವುದು

ಬಿ) ಪ್ರಾಥಮಿಕ ಶಾಲೆಗೆ ಎಲ್ಲ ಮಕ್ಕಳನ್ನು ನೋಂದಾಯಿಸುವುದು

ಸಿ) ಸಾರ್ವಜನಿಕ ರಸ್ತೆಗಳನ್ನು ನಿರ್ಮಿಸಿ, ರಿಪೇರಿ ಮತ್ತು ದುರಸ್ತಿ ಮಾಡಿ ಸುಸ್ಥಿತಿಯಲ್ಲಿಡುವುದು

ಡಿ) ಮೇಲಿನ ಎಲ್ಲ ಕಾರ್ಯಗಳು ಹೌದು

19. ಗ್ರಾಮ ಪಂಚಾಯತಿಯ ಕರ್ತವ್ಯಗಳಲ್ಲಿ ಕುಡಿಯಲು ಮತ್ತು ಸ್ನಾನಕ್ಕೆ ಒದಗಿಸುವ ನೀರನ್ನು ಪ್ರಾಣಿಗಳನ್ನು ತೊಳೆಯಲು ಉಪಯೋಗಿಸಬಾರದು ಮತ್ತು ಕಲ್ಮಶ ಗೊಳಿಸಬಾರದು. ಇಂತಹ ಅಪರಾಧ ಮಾಡಿದಲ್ಲಿ ಅಂಥವರಿಗೆ ಗ್ರಾಮ ಪಂಚಾಯತಿಯು ಈ ಶಿಕ್ಷೆ ವಿಧಿಸುತ್ತದೆ.

ಎ) ಬಂಧನ ಮತ್ತು ಜೈಲು ಶಿಕ್ಷೆ

ಬಿ) 50 ರೂಗಳ ದಂಡ

ಸಿ) ಅಪರಾಧಿಯನ್ನು ಆ ಸ್ಥಳದಿಂದ ಹೊರಹಾಕುವುದು

ಡಿ) ಮೇಲಿನ ಯಾವುವೂ ಅಲ್ಲ

20. ಗ್ರಾಮ ಪಂಚಾಯತ್ ಪ್ರದೇಶದಲ್ಲಿರುವ ಖಾಸಗಿ ಮೋರಿ, ಒಳಚರಂಡಿ ಮತ್ತು ಮನೆಯ ಗಲ್ಲಿಗಳ ದುರಸ್ತಿ ಮತ್ತು ಸುಸ್ಥಿತಿಯಲ್ಲಿಡುವುದು ಇವರ ಜವಾಬ್ದಾರಿ.

ಎ) ಮನೆ ಇರುವ ಜಾಗದ ಮನೆಯ ಒಡೆಯ ಅಥವಾ ಜಮೀನಿನ ಒಡೆಯರದ್ದು

ಬಿ) ವಾರ್ಡ್ ಪಂಚಾಯತ್ ಅವರದ್ದು

ಸಿ) ಗ್ರಾಮ ಪಂಚಾಯತ್ ಅವರದ್ದು

ಡಿ) ಎಲ್ಲರೂ ಹಂಚಿಕೊಂಡು ಮಾಡುವಂತಹುದು

21. ಗ್ರಾಮ ಪಂಚಾಯತಿಯ ಅಸ್ತಿತ್ವದಲ್ಲಿರುವ ಸಮಿತಿ ತಿಂಗಳ ಲೆಕ್ಕಾಚಾರವನ್ನು ಇಟ್ಟು ಸಮಿತಿಗೆ ಒಪ್ಪಿಸುವವರು.

ಎ) ಕಾರ್ಯದರ್ಶಿ

ಬಿ) ಅಧ್ಯಕ್ಷ

ಸಿ) ಉಪಾಧ್ಯಕ್ಷ

ಡಿ) ಮೇಲಿನ ಯಾರು ಅಲ್ಲ

22. ಉಪಾಧ್ಯಕ್ಷರ ಕಾರ್ಯಾಲಯದ ಕಾಲಾವಧಿ

ಎ) ಐದು ವರ್ಷ

ಬಿ) ಎರಡು ವರ್ಷ

ಸಿ) ಅವರು ಗ್ರಾಮಪಂಚಾಯತಿಯ ಸದಸ್ಯರಾಗಿರುವ ತನಕ

ಡಿ) ಅಧ್ಯಕ್ಷರು ನಿರ್ಧರಿಸಿದಂತೆ

23. ಗ್ರಾಮ ಪಂಚಾಯತಿ ಸಭೆಗೆ ಕನಿಷ್ಟ ಹಾಜರಾತಿ

ಎ) ಹತ್ತು

ಬಿ) ಒಟ್ಟು ಸದಸ್ಯರ ಶೇ. 10ರಷ್ಟು

ಸಿ) ಒಟ್ಟು ಸದಸ್ಯರ ಅರ್ಧಭಾಗ

ಡಿ) ನಿಶ್ಚಿತವಾಗಿಲ್ಲ

24. ಗ್ರಾಮ ಪಂಚಾಯತಿಯು ಇವುಗಳನ್ನು ಸ್ವೀಕರಿಸಲು ಅಧಿಕಾರ ಹೊಂದಿದೆ.

ಎ) ತೆರಿಗೆ ಬಿ) ಸುಂಕ

ಸಿ) ಕರ (ತೆರಿಗೆ) ಡಿ) ಮೇಲಿನ ಎಲ್ಲವೂ

25. ಗ್ರಾಮ ಪಂಚಾಯತಿಯ ಹಣಕಾಸಿನ ಪರಿಸ್ಥಿತಿಯನ್ನು ಹಣಕಾಸಿನ ಮಂಡಲಿ (ಕಮಿಷನ್) ಅವರು ಪರಿಶೀಲನೆ ಮಾಡುತ್ತಾರೆ. ಇದನ್ನು ಆಯ್ಕೆ ಮಾಡುವವರು

ಎ) ತಾಲ್ಲೂಕು ಪಂಚಾಯತ್

ಬಿ) ರಾಜ್ಯದ ಮುಖ್ಯಮಂತ್ರಿ

ಸಿ) ರಾಜ್ಯಪಾಲರು

ಡಿ) ಇವರಾರೂ ಅಲ್ಲ

26. ಸ್ಥಾಪನಾ ಖರ್ಚುಗಳಿಗೆ ಸರ್ಕಾರವು ಹಣದ ಅನುಮತಿ ಇವರಿಗೆ ನೀಡುತ್ತದೆ

ಎ) ತಾಲ್ಲೂಕು ಪಂಚಾಯತ್

ಬಿ) ಗ್ರಾಮ ಪಂಚಾಯತ್

ಸಿ) ಜಿಲ್ಲಾ ಪಂಚಾಯತ್

ಡಿ) ಮೇಲಿನ ಎಲ್ಲರಿಗೂ ಹೌದು

27. ಗ್ರಾಮ ಪಂಚಾಯತಿಯ ಸ್ಟ್ಯಾಂಡಿಂಗ್ ಕಮಿಟಿಗಳನ್ನು ಇವುಗಳಿಗಾಗಿ ಸ್ಥಾಪಿಸುತ್ತದೆ

ಎ) ವ್ಯವಸಾಯ ಉತ್ಪಾದನೆ

ಬಿ) ವಿದ್ಯಾಭ್ಯಾಸ ಮತ್ತು ಸಾರ್ವಜನಿಕ ಆರೋಗ್ಯ

ಸಿ) ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಡಿ) ಈ ಮೇಲಿನ ಎಲ್ಲವೂ ಹೌದು

28. ಉಪಾಧ್ಯಕ್ಷರು ಅಧ್ಯಕ್ಷರ ಕರ್ತವ್ಯಗಳನ್ನು ಈ ಸಮಯದಲ್ಲಿ ಮಾಡುತ್ತಾರೆ

ಎ) ಅಧ್ಯಕ್ಷರು ಬಾರದಿದ್ದಾಗ ಅಥವಾ ರಜೆ ತೆಗೆದುಕೊಂಡಾಗ

ಬಿ) ಅಧ್ಯಕ್ಷರ ಜೊತೆ ಜೊತೆಗೆ

ಸಿ) ಗ್ರಾಮ ಪಂಚಾಯತಿಯ ವಿಶೇಷ ಸಭೆ ನಡೆಸುವಾಗ

ಡಿ) ಈ ಮೇಲಿನ ಎಲ್ಲವೂ

29. ಅಬ್ದುಲ್ ನಸೀರ್ ಸಾಬ್ ಸ್ಟೇಟ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್ ಇಲ್ಲಿದೆ

ಎ) ಮೈಸೂರು  ಬಿ) ಬೆಂಗಳೂರು

ಸಿ) ಗುಲ್ಬರ್ಗಾ  ಡಿ) ಹಾಸನ

30. ಪಂಚಾಯತ್ ಹಣಕಾಸು ಅಭಿವೃದ್ಧಿ ಹಾಗೂ ಚಟುವಟಿಕೆಗಳ ಹನ್ನೊಂದನೆಯ ಹಣಕಾಸು ಆಯೋಗದ ಶಿಫಾರಸ್ಸಿನ ಕಾಲಾವಧಿ

ಎ) 1993–1994 ರಿಂದ 1998–1999

ಬಿ) 2000–2001ರಿಂದ 2004–2005

ಸಿ) 2003–2004 ರಿಂದ 2008–2009

ಡಿ) ಮೇಲಿನ ಎಲ್ಲವೂ ಹೌದು

## ಸಾಮಾನ್ಯ ಕನ್ನಡ ಪತ್ರಿಕೆ

31. 'ದಾರಿಹೋಕ' – ಈ ಪದದ ಸಮಾನಾರ್ಥ ಪದ ಇದು

ಎ) ದಾರಿಯಲ್ಲಿ ಹೋಗುತ್ತಿರುವವನು

ಬಿ) ಪ್ರವಾಸಿ

ಸಿ) ದಾರಿಯಲ್ಲಿ ನಿಂತವನು

ಡಿ) ದಾರಿಗೆ ಅಡ್ಡ ಬಂದವನು

32. 'ಜುಲ್ಮಾನೆ' – ಇದರ ವ್ಯಾಕರಣ ವಿಶೇಷಣ ಇದು

ಎ) ನುಡಿಗಟ್ಟು  ಬಿ) ದಂಡ

ಸಿ) ಅನ್ಯದೇಶ್ಯ ಪದ  ಡಿ) ದ್ವಿರುಕ್ತಿ

33. 'ಬುವಿ' – ಪದದ ತದ್ಭವ ಪದ ಇದು

ಎ) ಭವಿ  ಬಿ) ಛವಿ

ಸಿ) ಭೂಮಿ  ಡಿ) ಬಾವಿ

34. 'ಅಗತ್ಯ' – ಈ ಪದದ ವಿರುದ್ಧ ಪದ ಇದು

ಎ) ನಿರಗತ್ಯ  ಬಿ) ಅಗತ್ಯ

ಸಿ) ಅನಗತ್ಯ  ಡಿ) ಸನಗತ್ಯ

35. 'ಎರವಲು' – ಈ ಪದದ ಸಮಾನಾರ್ಥಕ ಪದ ಇದು

ಎ) ಅವಲಕ್ಕಿ  ಬಿ) ಅದಲು ಬದಲು

ಸಿ) ಅವಳಿ ಜವಳಿ  ಡಿ) ಸಾಲ

36. 'ನೀರು ನಿಡಿ' – ಇದಕ್ಕೆ ವ್ಯಾಕರಣದಲ್ಲಿ ಈ ಹೆಸರಿದೆ

ಎ) ದ್ವಿರುಕ್ತಿ

ಬಿ) ಅನುಕರಣ ಅವ್ಯಯ

ಸಿ) ಜೋಡಿಪದ

ಡಿ) ಭಾವಸೂಚಕ ಅವ್ಯಯ

37. 'ಕೈ ಕೊಡು' – ಈ ನುಡಿಗಟ್ಟಿನ ಅರ್ಥ ಇದು

ಎ) ಕೈ ಕುಲುಕು  ಬಿ) ಕೈ ಜೋಡಿಸು

ಸಿ) ಮೋಸಮಾಡು  ಡಿ) ಕೈ ಸೇರಿಸು

38. 'ಮಾತು ಬಲ್ಲವನಿಗೆ ಜಗಳವಿಲ್ಲ' – ಈ ಗಾದೆಯ ಅರ್ಥವಿದು

ಎ) ಮಾತಿದ್ದರೆ ಜಗಳ

ಬಿ) ಮಾತು ತಿಳಿದರೆ ಜಗಳ ಆಡಬಹುದು

ಸಿ) ಮಾತಿನಲ್ಲಿ ತೂಕವಿರಲಿ

ಡಿ) ಜಗಳ ಬೇಕಿದ್ದರೆ ಮಾತು ಬೇಕು

39. 'ಸಸ್ಯಹಾರ' – ಇದರ ಶುದ್ಧ ರೂಪ ಇದು

ಎ) ಸಸ್ಯಾಹಾರ  ಬಿ) ಸಸ್ಯಾಹರ

ಸಿ) ಸಸ್ಸ್ಯಾಹಾರ  ಡಿ) ಸಸ್ಯಹರ

40. 'ಕುರುಹು' – ಈ ಪದದ ಸಮಾನಾರ್ಥಕ ಪದ ಇದು

ಎ) ಕುರು  ಬಿ) ಕರು

ಸಿ) ಗುರುತು  ಡಿ) ಗರಿಕೆ

41. 'ಬಂಡೆಗಲ್ಲು' – ಇದನ್ನು ಹೀಗೆ ಬಿಡಿಸಿ ಬರೆಯಬೇಕು

ಎ) ಬಂಡೆ+ಗಲ್ಲು  ಬಿ) ಬಂಡೆಗ+ಅಲ್ಲು

ಸಿ) ಬಂ+ಡೆಗಲ್ಲು  ಡಿ) ಬಂಡೆ+ಕಲ್ಲು